ಅ) ಈ ಕಾರ್ಖಾನೆಗೆ ಬೇಕಾದ ಕಬ್ಬಿಣ ಅದಿರು ಪೂರೈಕೆಯ ವಿಷಯದಲ್ಲಿ ಕೇಂದ್ರ ಸರ್ಕಾರ ಅಂತಿಮ ತೀರ್ಮಾನ ಕೈಗೊಂಡಿದೆಯೇ?

ಇ) ಇಲ್ಲದಿದ್ದರೆ ಈ ಕಾರ್ಖಾನೆಯ ಪ್ರಗತಿ ಕುಂಠಿತವಾಗುವುದನ್ನು ತಪ್ಪಿಸಲು ಸರ್ಕಾರ ಕೇಂದ್ರ ಉಕ್ಕು ಖಾತೆಯೊಂದಿಗೆ ವ್ಯವಹರಿಸಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ವಿವಿಧ ಹಂತದ ಉದ್ದೇಶಿತ ಉತ್ಪಾದನಾ ದಿನಾಂಕ ಈ ಕೆಳಕಂಡಂತಿದೆ:

1.	ಹಾಟ್ ಸ್ಟ್ರೀಪ್ ಮಿಲ್	ಡಿಸೆಂಬರ್ 1996
2.	ಮೊದಲನೇ ಕೋರೆಕ್ಸ್ ಘಟಕ, ಬೇಸಿಕ್ ಆಕ್ಸಿಜನ್ ಘಟಕ ಹಾಗೂ ಕಂಟಿನ್ಯೂಯಸ್ ಕ್ಯಾಸ್ಟಿಂಟ್ ಘಟಕ	ಅಕ್ಟೋಬರ್ 1997
3.	ಪಲ್ಲೆಟೈಸೇಷನ್ ಘಟಕ	ಡಿಸೆಂಬರ್ 1997
4.	ಕೋರೆಕ್ಸ್ ಪ್ಲಾಂಟ್‌ನ 2ನೇ ಘಟಕ	ಮಾರ್ಚ್ 1998

ಆ) ಇಲ್ಲ

ಇ) ಹೌದು

ಈ) ಈ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಎಂ.ಆರ್.ಪಿ.ಎಲ್. ಸಂಸ್ಥೆ ಮೂಡಾಕ್ಕೆ ಕೊಡಬೇಕಾದ ಹಣ

436 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆ ಹಾಗೂ "ಮೂಡಾ"ಕ್ಕೆ ಬರಬೇಕಾಗಿರುವ ಹಣ ಎಷ್ಟು?

ಆ) ಈ ಹಣವನ್ನು ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ. 18.16 ಕೋಟಿಗಳು ಬರಬೇಕಾಗಿದೆ. ಅದರಲ್ಲಿ ರೂ. 3.00 ಕೋಟಿಗಳನ್ನು ಈಗಾಗಲೇ ಸಂಸ್ಥೆಯು ಪಾವತಿ ಮಾಡಿದೆ. ಈ ಸಂಸ್ಥೆಯಿಂದ ಮಂಗಳೂರು ನಗರ ಪಾಲಿಕೆಗೆ ಯಾವುದೇ ಹಣವು ಬರಬೇಕಾಗಿಲ್ಲ.

ಆ) ಎಂ.ಆರ್.ಪಿ.ಎಲ್. ಸಂಸ್ಥೆಯು ಅಭಿವೃದ್ಧಿ ಶುಲ್ಕ ಮತ್ತು ಜಲಸಂಪನ್ಮೂಲ ಕ್ರೋಢೀಕರಣ ಶುಲ್ಕವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಮಾಡಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಹಾಯ ಧನ

440 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಅ) ಇವುಗಳಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡುವ ಸಹಾಯ ಧನ ಬಾಕಿ ಇದೆ. ವಿವರ ನೀಡುವುದು.

ಆ) ಬಾಕಿಯಿದ್ದಲ್ಲಿ ಯಾವಾಗ ಈ ಹಣವನ್ನು ನೀಡಲಾಗುವುದು.

ಈ) ಸರ್ಕಾರದಿಂದ ಸಹಾಯ ಧನ ಸಿಗದೆ ನಷ್ಟ ಹೊಂದಿರುವ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ನೀಡಲಾಗುವುದೆ?

ಶ್ರೀ ಎನ್.ಎಂ. ನಬಿ (ಸಣ್ಣ ಕೈಗಾರಿಕಾ ಸಚಿವರು) :

ಅ) 31.3.1995ರಲ್ಲಿದ್ದಂತೆ 1,63,524 ಕೈಗಾರಿಕೆಗಳು ಇವೆ.

ಆ) 1379 ಸಣ್ಣ ಕೈಗಾರಿಕೆಗಳಿಗೆ ರೂ. 17.54 ಕೋಟಿ ಸಹಾಯ ಧನ ನೀಡಬೇಕಾಗಿದೆ.

ಇ) ಸದ್ಯದಲ್ಲಿಯೇ ಇದನ್ನು ವಿತರಿಸಲಾಗುವುದು.

ಈ) ಇಲ್ಲ.

ಬೃಹತ್ ಕೈಗಾರಿಕೆಗಳಿಂದ ಆಗುವ ಮಾಲಿನ್ಯ ಕುರಿತು

439 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರಸ್ತುತ ಇರುವ ನೆಲ, ಜಲ ಹಾಗೂ ವಾಯುವಿನ ಮಾಲಿನ್ಯ ಹೊರುವ ಸಾಮರ್ಥ್ಯವನ್ನು ನಿರ್ಧರಿಸುವವರೆಗೆ ಯಾವುದೇ ಹೊಸ ಬೃಹತ್ ಕೈಗಾರಿಕೆಗಳಿಗೆ ಅನುಮತಿ ನೀಡಲಾಗುವುದಿಲ್ಲ ಎನ್ನುವ ಸರ್ಕಾರದ ಆದೇಶವಿದ್ದರೂ ನಾಗಾರ್ಜುನ ಮತ್ತು ಉಷಾ ಇಸ್ಪಾಟ್‌ಗಳ ಯೋಜನೆಗಳಿಗೆ ಅಂಗೀಕಾರ ನೀಡಿದ್ದು ಸರಿಯೇ?

ಆ) ಅಂಗೀಕಾರ ನೀಡಿದ್ದಾದರೆ ಇದು ಕಾನೂನು ಬಾಹಿರವಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಜಿಲ್ಲೆಯಲ್ಲಿ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಮುನ್ನ ಈ ಪ್ರದೇಶದ ಪರಿಸರದ ಧಾರಣ ಶಕ್ತಿಯನ್ನು ಅಭ್ಯಸಿಸಬೇಕೆಂದು ಸರ್ಕಾರ ಇತ್ತೀಚೆಗೆ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ನಾಗಾರ್ಜುನ ಮತ್ತು ಉಷಾ ಐರನ್ ಮತ್ತು ಫೆರೊಮೆಟಲ್ಸ್ ಯೋಜನೆಗಳ ಪ್ರಸ್ತಾವನೆಯನ್ನು ಉನ್ನತ ಮಟ್ಟದ ಸಮಿತಿಯು ಈ ರೀತಿ ನಿರ್ಧಾರ ತೆಗೆದುಕೊಂಡಿರುವ ಮುಂಚೆಯೇ ಅನುಮೋದನೆ ನೀಡಿದ್ದಿತು. ಆದರೂ ಸಹ ಈ ಯೋಜನೆಗಳನ್ನು ಸ್ಥಾಪಿಸುವುದಕ್ಕೆ ಮುಂಚೆ ಪರಿಸರದ ದೃಷ್ಟಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಾಧಿಕಾರಿಗಳ ಅನುಮತಿಯನ್ನು ಪಡೆಯುವಂತೆ ನಿಬಂಧನೆ ವಿಧಿಸಿ ಅವುಗಳಿಗೆ ಸರ್ಕಾರ ಅನುಮತಿಯನ್ನು ನೀಡಿದೆ.

ಆ) ಉದ್ಭವಿಸುವುದಿಲ್ಲ.

ಬೃಹತ್ ಕೈಗಾರಿಕೆಗಳಿಗೆ ಉಚಿತವಾಗಿ ನೀಡಿರುವ ಭೂಮಿಯ ಬಗ್ಗೆ

438 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ತೋಕೂರು ಕೆಂಜಾರು, ಪಣಂಬೂರು ಮತ್ತು ಬೈಂಪಾಡಿ ಗ್ರಾಮಗಳಲ್ಲಿ ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಸ್ವಾಧೀನದ 400 ಎಕರೆ ಭೂಮಿಯನ್ನು ಬೃಹತ್ ಕೈಗಾರಿಕೆಯೊಂದಕ್ಕೆ ಉಚಿತವಾಗಿ ನೀಡಲಾಗಿದೆಯೇ?